ದಿಃ **15-02-2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.**SPM** ವಕೀಲರವರಿಂದಃ

**01.** ಓಲಿ ಈಶಪ್ಪರವರು ನನಗೆ ಚಿಕ್ಕಪ್ಪನಾಗಬೇಕು. ದೊಡ್ಡಸಿದ್ದಪ್ಪರವರು ನನಗೆ ಚಿಕ್ಕಪ್ಪನಾಗಬೇಕು. ಮುದುಕಪ್ಪರವರ ಒಟ್ಟು ಕಟುಂಬದ ಆಸ್ತೀ ಎಷ್ಟು ಇದೆ ಎಂದು ನನಗೆ ಗೊತ್ತಿರುವುದಿಲ್ಲ, ಸಾಕ್ಷಿಯು ಮುಂದುವರೆದು ಮುದುಕಪ್ಪರವರದು **3** ಎಕರೆ **70** ಸೆಂಟ್ಸ ಇರುವುದು ಅಷ್ಟೇ ಗೊತ್ತಿರುತ್ತದೆ. ನಮ್ಮ ಹೊಲ ಮತ್ತು ಈಶಪ್ಪರವರ ಹೊಲ ಅಕ್ಕಪಕ್ಕದಲ್ಲಿ ಇರುತ್ತದೆ ಎಂದರೆ ಸರಿ. ನಮ್ಮ ಹೊಲದಲ್ಲಿ ಬೋರು ಇರುತ್ತದೆ ಎಂದರೆ ಸರಿ. ಅದಕ್ಕೆ **PW.1** ರವರ **TC** ಯಿಂದ ಕರೆಂಟ್ ಕನೆಕ್ಷನನ್ನು ತೆಗೆದುಕೊಂಡಿರುತ್ತೇನೆ ಎಂದರೆ ಸರಿ. ನನ್ನ **2** ನೇ ಮಗನಾದ ಪ್ರತ್ಯೇಪ್ಪ **PW.1** ರವರ **JCB** ಡ್ರೈವರ ಆಗಿದ್ದರು ಎಂದರೆ ಆಗ ಆಗಿದ್ದರು ಎಂದು ನುಡಿಯುತ್ತಾರೆ.

**02.** **1** ನೇ ಪ್ರತಿವಾದಿಯ ತಂದೆಯಾದ ಓಲಿ ಸಿದ್ದಪ್ಪರವರಿಗೆ ಒಟ್ಟು **3** ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ಸೃಷ್ಟಿ ಮಾಡಿದ ಕರಾರು ಪತ್ರವನ್ನು ಹನುಮಂತ ದೇವರ ಗುಡಿಯಲ್ಲಿ ಬರೆದಿರುತ್ತಾರೆ. ಆಗ ಸಮಯ ಬೆ.**09.30** ಇಂದ **10.00** ಗಂಟೆ ಆಗಿರಬಹುದು. ಅದಕ್ಕೆ ದೊಡ್ಡಸಿದ್ದಪ್ಪ, ಮುದುಕನಗೌಡ, ಹುಣಸಿಕಾಯಿ ನೀಲಪ್ಪ, ಬಸವರಾಜಪ್ಪ, ನಾನು ಮತ್ತು ಓಲಿ ಸಿದ್ದಪ್ಪ. ನನ್ನ ಪ್ರಮಾಣಪತ್ರದಲ್ಲಿ ವ್ಯವಹಾರ ಮಾಡಿಕೊಂಡಿರುತ್ತಾರೆ ಎಂದು ಇರುತ್ತದೆ, ನೀವು ಆ ಸಮಯದಲ್ಲಿ ಅಲ್ಲಿ ಇದ್ದಿರೋ ಇಲ್ಲವೋ ಎಂಬ ಪ್ರಶ್ನೆಗೆ ಸಾಕ್ಷಿಯು ಆಗ ನಾನು ಅಲ್ಲಿಯೇ ಇದ್ದೇನು ಎಂದು ನುಡಿಯುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುವ ಸಂಗತಿಗಳು ಸತ್ಯದಿಂದ ಕೂಡಿರುತ್ತದೆ. ವ್ಯವಹಾರವು **1450/-** ರೂಪಾಯಿಗೆ **01** ಸೆಂಟ್ಸ್ ರಂತೆ **40** ಸೆಂಟ್ಸ ಖರೀದಿ ಮಾಡಿಕೊಂಡಿರುತ್ತಾರೆ. ವ್ಯವಹಾರವು ಮತ್ತು ಮಾರಾಟವು ಒಂದೇ ದಿನ ಆಗಿರುವುದಿಲ್ಲ. ಮೊದಲನೆ ದಿನ ವ್ಯವಹಾರ ಆಗಿರುತ್ತದೆ ಅದರ ಮರುದಿನ ಖರೀದಿ ಆಗಿರುತ್ತದೆ. ಆ ವ್ಯವಹಾರಕ್ಕೆ ನಾನು **1** ನೇದವನಾಗಿ ಸಹಿ ಹಾಕಿರುತ್ತೇನೆ. ನನ್ನ ಜೊತೆಗೆ ಮುದುಕಪ್ಪ, ನೀಲಪ್ಪ, ಓಲಿ

ಸಿದ್ದಪ್ಪ, ಬಸವರಾಜಪ್ಪರವರು ಸಹಿಯನ್ನು ಹಾಕಿರುತ್ತಾರೆ. **2** ನೇದವರಾಗಿ ಯಾರುಸಹಿ ಹಾಕಿರುತ್ತಾರೆ ನನಗೆ ಗೊತ್ತಿರುವುದಿಲ್ಲ ನಾನು ಸಹಿ ಹಾಕಿ ಬಂದಿರುತ್ತೇನೆ. **3** ನೇದವರಾಗಿ ಯಾರು ಸಹಿ ಹಾಕಿರುತ್ತಾರೆ ಎಂದು ನನಗೆ ನೆನಪು ಇರುವುದಿಲ್ಲ. ವ್ಯವಹಾರವಾದ ಜಮೀನು ಒಟ್ಟು **3.70** ಎಕರೆ ಇರುತ್ತದೆ. ವ್ಯವಹಾರ ಆಗಿರುವುದು **40** ಸೆಂಟ್ಸಿಗೆ ಆಗಿರುತ್ತದೆ. ವ್ಯವಹಾರ ಆಗಿರುವ ಜಮೀನಿನ ಪೂರ್ವ- ಪಶ್ಚಿಮ, ಉತ್ತರ-ದಕ್ಷಿಣ ಎಷ್ಟು ಆಗುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ. ವ್ಯವಹಾರದು ಒಂದು ದಿನ ಮೊದಲು ಕೊಯ್ಯಲಾರಗಟ್ಟಿಯಲ್ಲಿ ಆಗಿರುತ್ತದೆ.

**03.** ಸೃಷ್ಟಿ ಮಾಡಿದ ಕರಾರು ಪತ್ರದ ಸ್ಟ್ಯಾಂಪ್ ಪೇಪರನ್ನು ಗಂಗಮ್ಮರವರು ತಂದಿರುತ್ತಾರೆ. ಸ್ಟ್ಯಾಂಪ ಪೇರನ್ನು ಗಂಗಮ್ಮರವರು ವ್ಯವಹಾರವನ್ನು ಬರೆಯುವ ದಿನ ತಂದಿರುತ್ತಾರೆ. ಅದರ ದಿನಾಂಕವನ್ನು ನನಗೆ ಹೇಳಲು ಆಗುವುದಿಲ್ಲ. ದಿ.**24-08-1999** ರಂದು ಸ್ಟ್ಯಾಂಪ ಪೇಪರನ್ನು ತಂದಿರುತ್ತಾರಾ ಎಂದರೆ ಸರಿ. ಓಲಿ ದೊಡ್ಡಸಿದ್ಧಪ್ಪರವರು ಓಲಿ ದೊಡ್ಡಮುದುಕಪ್ಪರವರ ವಿರುದ್ಧ ಸಹಾಯಕ ಆಯುಕ್ತರ ನ್ಯಾಯಾಲಯದಲ್ಲಿ ದಾವಾ ಹೂಡಿರುವ ವಿಷಯವು ನನಗೆ ಗೊತ್ತಿರುವುದಿಲ್ಲ. ಈ ದಾವೆಯ ಬಗ್ಗೆ ತಿಳಿದುಕೊಳ್ಳಲು ನಾನು ಪ್ರಯತ್ನ ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಅವರು ದಾವೆಯನ್ನು ಹಾಕಿರುವುದಿಲ್ಲ ಎಂದು ನುಡಿಯುತ್ತಾರೆ. ಓಲಿ ದೊಡ್ಡಮುದುಕಪ್ಪರವರು ಓಲಿ ದೊಡ್ಡಸಿದ್ದಪ್ಪರವರ ಮೇಲೆ ಬೆರೋಂದು ದಾವೆಯನ್ನು ಹೂಡಿರುವುದು ನನಗೆ ಗೊತ್ತಿರುತ್ತದೆ. ಈ ಸದರಿ ದಾವೆಯು ಅವರು ನಮ್ಮ ಜಾಗ ಎಂದು ಹಾಕಿರುತ್ತಾರೆ. ಓಲಿ ದೊಡ್ಡಮುದುಕಪ್ಪರವರು, ಓಲಿ ದೊಡ್ಡಸಿದ್ದಪ್ಪರವರಿಗೆ ಜಾಗವನ್ನು ಇರುವುದಕ್ಕೆ ಕೊಟ್ಟಿರುತ್ತೇವೆ ಬಿಟ್ಟು ಕೊಡಿ ಎಂದು ಹಾಕಿರುತ್ತಾರೆ ಎಂದರೆ ಸಾಕ್ಷಿಯು ಓಲಿ ದೊಡ್ಡಸಿದ್ದಪ್ಪರವರು ಖರೀದಿ ತೆಗೆದುಕೊಂಡಿರುತ್ತಾರೆ. ಸಾಕ್ಷಿ ಹೇಳಲು ಇಂದು ನನಗೆ ಓಲಿ ಈಶಪ್ಪನು ಕರೆದುಕೊಂಡು ಬಂದಿರುತ್ತಾನೆ ಎಂದು ನುಡಿದು ಸಾಕ್ಷಿಯು ಮುಂದುವರೆದು ವಾದಿಯಾದ ಓಲಿ ಸಿದ್ದಪ್ಪನು ಕರೆದುಕೊಂಡು ಬಂದಿರುತ್ತಾನೆ ಎಂದು ನುಡಿಯುತ್ತಾನೆ. ಸೃಷ್ಟಿ ಮಾಡಿದ ಕರಾರು ಪತ್ರವನ್ನು ಬರೆದು ಸಿದ್ದಪ್ಪರವರ ಕಡೆ ಕೊಟ್ಟಿರುತ್ತಾರೆ. ಮುದುಕಪ್ಪರವರು

ಕರಾರು ಪತ್ರವನ್ನು ಸಿದ್ದಪ್ಪರವರ ಕಡೆ ಕೊಟ್ಟಿರುತ್ತಾರೆ. ಕರಾರು ಪತ್ರವು ಅಂದಾಜು **2** ಪುಟ ಆಗಿರುತ್ತದೆ. ಬೇರೆ ಬೇರೆ ಸ್ಟ್ಯಾಂಪ್ ಪೇಪರ ಮೇಲೆ ಕರಾರು ಪತ್ರವನ್ನು ಬರೆದಿರುತ್ತಾರೆ. ಆ ಎರಡು ಸ್ಟ್ಯಾಂಪ್ ಪೇರನ್ನು ಸಿದ್ದಪ್ಪನ ಹೆಸರಿನಲ್ಲಿ ತಂದಿರುತ್ತಾರೆ.ಆ ಸ್ಟ್ಯಾಂಪ್ ಪೇರನ್ನು ತಂದಾಗ ಸಮಯ ಅಂದಾಜು **12.30** ವರೆಯಿಂದ **01.00** ಗಂಟೆ ಆಗಿರುಬಹುದು. ಆ ವ್ಯವಹಾರದ ಪತ್ರದಲ್ಲಿ ಜಾಗವನ್ನು ತೆಗೆದುಕೊಂಡಿರುತ್ತೇವೆ ಎಂದು ಬರೆದಿರುತ್ತಾರೆ. ವ್ಯವಹಾರ ಪತ್ರವು ಬರೆಯುವ ಸಮಯದಲ್ಲಿ ಪಹಣಿಯು ಸಿದ್ದಪ್ಪನ ಹೆಸರಿನಲ್ಲಿ ಇರುತ್ತದೆ. ಎಷ್ಟು ವರ್ಷಕ್ಕೆ ನೊಂದಣಿ ಮಾಡಿಸಿಕೊಡುತ್ತೇವೆ ಎಂದು ಹೇಳಿರುತ್ತಾರೆ ಎಂದರೆ ಸಾಕ್ಷಿಯು ಅವ್ವನ ಹೆಸರಿನಲ್ಲಿ ಮಾಡಿಸಿ, ಮಾಡಿಸಿಕೊಡುತ್ತೇವೆ ಎಂದು ಹೇಳಿರುತ್ತಾರೆ. ಅವರ ತಾಯಿ ಈ ವ್ಯವಹಾರ ಆದ **2-3** ವರ್ಷದ ನಂತರ ತೀರಿಕೊಂಡಿರುತ್ತಾರೆ. ಅವರ ತಾಯಿ ಈ ವ್ಯವಹಾರ ಆದ **4** ವರ್ಷಕ್ಕೆ ತೀರಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅವೆಲ್ಲ ನಮಗೆ ಗೊತ್ತಾಗುವುದಿಲ್ಲ ಒಂದು ವರ್ಷ ಹೆಚ್ಚು ಕಡಿಮೆ ಇರಬಹುದು ಎಂದು ಹೇಳಿರುತ್ತೇನೆ ಎಂದು ನುಡಿಯುತ್ತಾರೆ. **40** ಸೆಂಟ್ಸನ ದುಡ್ಡನ್ನು ವ್ಯವಹಾರ ಬರೆಸಿದ ದಿನ ನೀಡಿರುತ್ತಾರೆ. ಆ ದುಡ್ಡನ್ನು ಮುದುಕಪ್ಪನ ಕೈಯಲ್ಲಿ ಕೊಟ್ಟಿರುತ್ತಾರೆ. ವ್ಯವಹಾರ ಪತ್ರವನ್ನು **01.00** ಮೇಲ್ಪಟ್ಟು ಬರೆಯುವುದು ಮುಗಿದಿರಬಹುದು. ಆ ವ್ಯವಹಾರದಲ್ಲಿ ಹೊಲದ ಸ್ವಾಧೀನದ ಬಗ್ಗೆ ಮಾತು ಆಗಿರುತ್ತದಾ ಎಂದರೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಹೊಲದ ಸ್ವಾಧೀನವನ್ನು ಅವತ್ತೇ ನೀಡಿರುತ್ತಾರೆ. ಸ್ವಾಧೀನ ಎಷ್ಟು ಗಂಟೆಗೆ ಬಿಟ್ಟು ಕೊಟ್ಟಿರುತ್ತಾರೆ ಎಂದು ನನಗೆ ಸಮಯ ಗೊತ್ತಿರುವುದಿಲ್ಲ. **40** ಸೆಂಟ್ಸನ್ನು ಅಳತೆ ಮಾಡಿ ಸ್ವಾಧೀನವನ್ನು ಬಿಟ್ಟುಕೊಟ್ಟಿರುತ್ತಾರೆ. ಅಳತೆ ಮಾಡಲು ಸೋಗಿ ಗ್ರಾಮದ ಸರ್ವೇಯರವರು ಬಂದಿರುತ್ತಾರೆ ಅವರು ಈಗ ತೀರಿಕೊಂಡಿರುತ್ತಾರೆ. ಅಳತೆ ಮಾಡಲು ಅರ್ಜಿಯನ್ನು ಯಾರು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಓಲಿ ದೊಡ್ಡಸಿದ್ದಪ್ಪರವರು, ಓಲಿ ಮುದುಕಪ್ಪರವರ ಮೇಲೆ ಸಹಾಯಕ ಆಯುಕ್ತರ

ನ್ಯಾಯಾಲಯದಲ್ಲಿ ಸಲ್ಲಿಸಿದ ಪ್ರಕರಣದ ದಾಖಲೆಗಳಲ್ಲಿ ನಾನು ಸಹಿ ಮಾಡಿರುತ್ತೇನೆ, ಆ ದಾಖಲೆಗಳು ಸರಿ ಇವೆಯೋ ಅಥವಾ ಈ ಪ್ರಕರಣದಲ್ಲಿ ಸಲ್ಲಿಸಿರುವ ದಾಖಲೆಗಳು ಸರಿ ಇವೆಯೋ ಎಂದರೆ ಸಾಕ್ಷಿಯು ಎದರಲ್ಲಿ ಮಾಡಿರುತ್ತೇನೋ ಗೊತ್ತಿಲ್ಲ ಆದರೆ ಈ ಪ್ರಕರಣದಲ್ಲಿನ ದಾಖಲೆಗಳಲ್ಲಿ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ದೊಡ್ಡಸಿದ್ದಪ್ಪರವರು ದೊಡ್ಡ ಮುದುಕಪ್ಪರವರ ವಿರುದ್ಧ ಸಹಾಯಕ ಆಯುಕ್ತರ ನ್ಯಾಯಾಲಯದಲ್ಲಿ ದಾವಾ ಆಸ್ತೀಯನ್ನು ಖರೀದಿ ಕೊಟ್ಟಿರುತ್ತಾರೆ ಎಂದು ಮೇಲ್ಮನವಿ ಸಲ್ಲಿಸಿರುವ ದಾಖಲೆಗಳ ಮೇಲೆ ಸಹಿ ಮಾಡಿರುತ್ತೇನೆ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಮನೆತನದ ಖರ್ಚಿಗೆ ಎಂದು ಬರೆಸಿದ್ದು ಯಾವ ಖರ್ಚಿಗೆ ಬರೆಸಿರುತ್ತಾರೆ ಎಂದರೆ ಸಾಕ್ಷಿಯು ಅವರು ಮಾರಿರುತ್ತಾರೆ ಅವರು ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದುಡ್ಡನ್ನು ಕೊಟ್ಟಾಗ **500/-** ರೂಪಾಯಿ ಮುಖಬೆಲೆಯ ನೋಟುಗಳು ಇದ್ದವು. ಗಂಗಮ್ಮ ತೀರಿಕೊಂಡ ನಂತರ ಅವಳ ಇಬ್ಬರು ಹೆಣ್ಣುಮಕ್ಕಳನ್ನು ಈ ವ್ಯವಹಾರದ ಬಗ್ಗೆ ಕೇಳಿರುತ್ತೀರಾ ಎಂದರೆ ಸಾಕ್ಷಿಯು ಮೊದಲಿಗೆ ಅವರು ಹೋಗಿರಬಹುದು ನಾವು ಹೋಗಿರುವುದಿಲ್ಲ ಎಂದು ನುಡಿದಿದ್ದು ನಂತರ ಸಾಕ್ಷಿಗೆ ನೆನಪಾಗಿ ಹೌದು ಮಹೇಶಪ್ಪರವರ ಹತ್ತಿರ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ನಾನು ಮತ್ತು ಈಶಪ್ಪರವರು ಆತ್ಮಿಯರು ಇರುವುದರಿಂದ ಸೃಷ್ಟಿ ಮಾಡಿದ ಕರಾರು ಪತ್ರಕ್ಕೆ ಸಹಿ ಮಾಡಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ

"ನನ್ನ ಸಮಕ್ಷಮ"

**Sd/-**

(ಶ್ರೀಮತಿ ಅಕ್ಷತಾ ಟಿ.)
ದಿವಾಣಿ ನ್ಯಾಯಾಧೀಶರು,
ಹಡಗಲಿ.